ಚಿಕ್ಕಮಗಳೂರಿನವರಾದ ಎಂ.ಆರ್. ದತ್ತಾತ್ರಿ ಕಾದಂಬರಿ, ಅನುವಾದ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರು. ಮೈಸೂರು ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಕೆಜಿಎಫ್, ಪುಣೆ, ಸ್ಯಾನ್ ಫ್ರಾನ್ಸಿಸ್ಕೋ ಮತ್ತು ಲಾಸ್ ಏಂಜಲೀಸ್ ನಗರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರು ನಿವಾಸಿ. 'ಅಲೆಮಾರಿ ಕನಸುಗಳು' (ಕವನ ಸಂಕಲನ),'ಪೂರ್ವಪಶ್ಚಿಮ' (ಅಂಕಣ ಬರಹ ಸಂಗ್ರಹ), 'ದ್ವೀಪವ ಬಯಸಿ' (ಕಾದಂಬರಿ) 'ಮಸುಕು ಬೆಟ್ಟದ ದಾರಿ' (ಕಾದಂಬರಿ), 'ತಾರಾಬಾಯಿಯ ಪತ್ರ' , 'ಒಂದೊಂದು ತಲೆಗೂ ಒಂದೊಂದು ಬೆಲೆ' (ಕಾದಂಬರಿ)  ಅವರ ಪ್ರಮುಖ ಕೃತಿಗಳು.

ವೃದ್ಧಿಯ ಪ್ಯಾಟರ್ನ್ ಅನ್ನು ನಾವು ಅವರ ಎಲ್ಲ ಕಾದಂಬರಿಗಳಲ್ಲೂ ಗುರುತಿಸಬಹುದು.

ಓದುಗರಲ್ಲಿ ಕಾದಂಬರಿ ಪ್ರಕಾರವು ಎಂತಹ ಜನಪ್ರಿಯ ಮಾಧ್ಯಮ ಎನ್ನುವುದನ್ನು ಅರಿಯಲು ಭೈರಪ್ಪನವರಿಗಿಂತ ಆಚೆಗೆ ಉದಾಹರಣೆಗಾಗಿ ನಾವು ನೋಡಬೇಕಿಲ್ಲ. ಅವರು 1996ರಲ್ಲೇ ತಮ್ಮ ಆತ್ಮಕಥೆ 'ಭಿತ್ತಿ'ಯಲ್ಲಿ ತೀವ್ರ ಎಡಪಂಥೀಯ ನಿಲುವುಗಳಿಂದ ಪ್ರೇರೇಪಿತವಾದ ರಾಜಕೀಯ ಮತ್ತು ಔದ್ಯೋಗಿಕ ಸನ್ನಿವೇಶಗಳಿಂದಾಗಿ ತಮ್ಮ ಬದುಕಿನುದ್ದಕ್ಕೂ ಅನುಭವಿಸಿದ ಕಷ್ಟಗಳು, ತಾರತಮ್ಯಗಳು, ಕಂಡ ಸ್ವಾರ್ಥಸಾಧನೆಗಳು, ವಂಚನೆಗಳು ಮುಂತಾದವನ್ನು ಕುರಿತು ವಿವರವಾಗಿ ಬರೆದಿದ್ದರೂ, ಅದೇ ತಿರುಳಿನ ಕಥನರೂಪವಾದ 'ಆವರಣ' ಕಾದಂಬರಿಯು 2007ರಲ್ಲಿ, 'ಭಿತ್ತಿ' ಬಂದ ಹನ್ನೊಂದು ವರ್ಷಗಳ ನಂತರ ಬಂದೂ, ಓದುಗರನ್ನು ತಲುಪುವಲ್ಲಿ ದಾಖಲೆಯನ್ನೇ ನಿರ್ಮಿಸಿತು.

'ಸ್ಥಿತ್ಯಂತರ ಕಾಲ' ಎನ್ನುವುದು ಭೈರಪ್ಪನವರ ಒಲವಿನ ನುಡಿಗಟ್ಟಾಗಿತ್ತು. ಅದನ್ನು ಅವರ ಅನೇಕ ಲೇಖನಗಳಲ್ಲಿ ಕಾಣಬಹುದು. ಒಂದು ಯುಗವು ಮುಗಿದು ಮತ್ತೊಂದು ಶುರುವಾಗುವಲ್ಲಿನ ನಡುವಿನ ಸಂಧಿಕಾಲವು ಸ್ಥಿತ್ಯಂತರ ಕಾಲವಾಗುತ್ತದೆ. ಭೈರಪ್ಪ ನಿಜಕ್ಕೂ ಸ್ಥಿತ್ಯಂತರ ಕಾಲದ ಬರಹಗಾರ. ನದಿಯೆರಡರ ಸಂಗಮದ ಹೊಯ್ದಾಟದಂತೆ ಸ್ಥಿತ್ಯಂತರ ಕಾಲವು ತವಕ, ತಲ್ಲಣ, ಮತ್ತು ಘರ್ಷಣೆಗಳ ಕಾಲ. ಬದುಕಿನ ಮೌಲ್ಯಗಳು ಪಲ್ಲಟಗೊಳ್ಳುವ ಮತ್ತು ಬದಲಾಗುವ ಕಾಲ. ಇವು ಅವರಿಗೆ ವಿಶೇಷ ವಸ್ತುಗಳಾಗುತ್ತಿದ್ದವು. ಇದನ್ನು ಅವರ ಎಲ್ಲ ಕಾದಂಬರಿಗಳಲ್ಲಿ– ಅದರಲ್ಲೂ ವಿಶೇಷವಾಗಿ– 'ವಂಶವೃಕ್ಷ', 'ಗ್ರಹಣ', 'ತಬ್ಬಲಿಯು ನೀನಾದೆ ಮಗನೇ', 'ಜಲಪಾತ', 'ಸಾಕ್ಷಿ' ಕಾದಂಬರಿಗಳಲ್ಲಿ ಕಾಣಬಹುದು. ಅದು ಇನ್ನೂ ಸೂಕ್ಷ್ಮವಾಗುವುದು ಅವರ 'ನೆಲೆ' ಕಾದಂಬರಿಯಲ್ಲಿ. ಹುಟ್ಟು– ಸಾವುಗಳ ಬಗ್ಗೆ ಅದರ ನಾಯಕ ಅರವತ್ತಕ್ಕೆ ಹತ್ತಿರದ ಕಾಳಪ್ಪ ಯೋಚಿಸುವುದಕ್ಕೂ ಮತ್ತು ಕಥೆಯುದ್ದಕ್ಕೂ ಕಾಳಪ್ಪನೊಡನೆ ಒಡನಾಡುವ ಕುಮಾರ ಮತ್ತು ಮಾಲತಿ ಎನ್ನುವ ತರುಣ ದಂಪತಿ ಯೋಚಿಸುವುದಕ್ಕೂ ಇರುವ ವ್ಯತ್ಯಾಸ ಬರೀ ವಯಸ್ಸಿನ ಅಂತರದ್ದಷ್ಟೇ ಅಲ್ಲ, ಜೊತೆಯಲ್ಲಿ ಬದಲಾದ ಯುಗಧರ್ಮವೂ ಕೂಡಿರುತ್ತದೆ. ಆ ಸೂಕ್ಷ್ಮಗಳು ಭೈರಪ್ಪನವರಲ್ಲಿ ಪ್ರಕಾಂಡವಾಗಿತ್ತು.

ಹುಟ್ಟು– ಸಾವು ಮತ್ತು ಅಸ್ತಿತ್ವದ ಮೇಲಿನ ಪ್ರಶ್ನೆಗಳು ತತ್ತ್ವಶಾಸ್ತ್ರದಲ್ಲಿ ಅರ್ಥಗಳ ಹುಡುಕಾಟಕ್ಕೆ ಇಳಿದರೆ, ಸೃಜನಶೀಲ ಸಾಹಿತ್ಯದಲ್ಲಿ ಭಾವಗಳ ಹುಡುಕಾಟಕ್ಕೆ ಇಳಿಯುತ್ತವೆ. ಕಾದಂಬರಿ ಬರಹಕ್ಕೂ ತತ್ತ್ವಶಾಸ್ತ್ರಕ್ಕೂ ಅವಿನಾಭಾವ ಸಂಬಂಧವಿದೆ. ತಮ್ಮ ಓದಿನ ದಿನಗಳಲ್ಲೇ ತತ್ತ್ವಶಾಸ್ತ್ರವನ್ನು ಅಧ್ಯಯನ ವಿಚಾರವಾಗಿ ಆಯ್ದುಕೊಂಡ ಭೈರಪ್ಪನವರು ಇವೆರಡೂ ಜ್ಞಾನಶಾಖೆಗಳನ್ನು ಮೇಳೈಸುವುದರಲ್ಲಿ ನಿಸ್ಸೀಮರಾಗಿದ್ದರು. ಭಾವದ ಆಳಕ್ಕೆ ಇಳಿಯಲು ತತ್ತ್ವದ ನೆಲೆಗಟ್ಟು ಬೇಕು ಮತ್ತು ತತ್ತ್ವದ ಆಳಕ್ಕೆ ಭಾವ ಗ್ರಹಿಕೆಯು ಶುದ್ಧರೂಪದಲ್ಲಿರಬೇಕು. ಇದನ್ನು ಭೈರಪ್ಪನವರಷ್ಟು ಚೆನ್ನಾಗಿ ಅರ್ಥಮಾಡಿಕೊಂಡ ಮತ್ತೊಬ್ಬ ಕಾದಂಬರಿಕಾರ ವಿರಳ. ಅವರಿಗೆ ಭಾರತೀಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರಗಳು ಅಧ್ಯಯನದಿಂದ ಲಭಿಸಿದ್ದವು ಮತ್ತು ಅವರ ಎದೆಯಾಳದಲ್ಲಿ ಯಾವತ್ತಿಗೂ ಒಬ್ಬ ಕಥೆಗಾರನಿದ್ದ. ಈ ಅಪರೂಪ ಸಂಗಮವು ಸೃಷ್ಟಿಸುವ ಪ್ರತೀಕಗಳು